<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>
ಸಿ.ಸಿ. ನಂ. 28510-2009

ಸಿಡಬ್ಲೂ -14 ಪಿಡಬ್ಲೂ-4

| | |
|---|---|
| ಸಾಕ್ಷಿದಾರರ ಹೆಸರು | : ಹನುಮಂತರಾಜು ಬಿ |
| ತಂದೆಯ ಹೆಸರು | : ಸಿ ಬೈಲಪ್ಪ |
| ವಯಸ್ಸು | : 55 ವರ್ಷ |
| ಕೆಲಸ | : ಎಫ್.ಡಿ.ಎ, ಎಸ್.ಎಸ್.ಎಲ್.ಸಿ ಬೋರ್ಡ್ |
| ವಾಸ | : ತಿಪ್ಪೇನಹಳ್ಳಿ, ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 28-02-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನಾನು ರಾಜ್ಯ ಶಿಕ್ಷಣ ಮತ್ತು ಸಂಶೋಧನಾ ನಿರ್ದೇಶನಾಲಯ ದಲ್ಲಿ ಎಸ್.ಡಿ.ಎ ಆಗಿ 2003 ರಿಂದ 2013 ರವರೆಗೆ ಕೆಲಸ ಮಾಡಿರುತ್ತೇನೆ.

ಆ ಸಮಯದಲ್ಲಿ ನಾನು ಅನುದಾನಿತ ಶಾಲೆಗಳಿಗೆ ವೇತನವನ್ನು ಬರಿಸುವ ಕೆಲಸವನ್ನು ಮಾಡುತ್ತಿದ್ದೆ. 2000ನೇ ಇಸವಿಯ ಫೆಬ್ರವರಿ ಮತ್ತು ನವೆಂಬರ್ ತಿಂಗಳುಗಳಲ್ಲಿ ಪ್ರಕಾಶನಗರದ ಜ್ಯೋತಿ ಕನ್ನಡ ಮತ್ತು ತಮಿಳು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸದರಿ 2 ತಿಂಗಳುಗಳ ಬಿಲ್ಲುಗಳನ್ನು ತಮ್ಮ ಕಚೇರಿಗೆ ಸಲ್ಲಿಸಿದ್ದರು. ಅದನ್ನು ಪರಿಶೀಲಿಸಿದಾಗ ಸದರಿ ಎರಡು ತಿಂಗಳುಗಳ ವೇತನಗಳನ್ನು ಎರಡು ಎರಡು ಬಾರಿ ತೆಗೆದುಕೊಂಡಿರುವುದು ಕಂಡು ಬಂದಿತ್ತು.

ನಮ್ಮ ಬಿ.ಇ.ಒ ರವರಾದ ಚಾಸಾ 18 ರವರು ಕಾರ್ಬನ್ ಪ್ರತಿಗಳಲ್ಲಿ ಸ್ಪಷ್ಟತೆ ಇರಲಿ ಎಂಬ ಕಾರಣದಿಂದ 1+3 ಬದಲಾಗಿ 1+1 ಕಾರ್ಬನ್ ಪ್ರತಿಯನ್ನು ತಯಾರಿಸುವಂತೆ ಮೌಖಿಕವಾಗಿ ನನಗೆ ಸೂಚಿಸಿದ್ದರು. ಆ ಸಮಯದಲ್ಲಿ ಚಾಸಾ 18 ರವರೇ ವೇತನ ಬರಿಸುವ ಅಧಿಕಾರಿಯಾಗಿದ್ದರು. ಸದರಿ ಬಿಲ್ಲುಗಳ ಪೈಕಿ ಮೂಲ ಬಿಲ್ಲಿಗೆ ಪೂರ್ಣ ಸಹಿಯನ್ನು ಮಾಡಿ, ಕಾರ್ಬನ್ ಪ್ರತಿಗಳಿಗೆ ಸಣ್ಣ ಸಹಿಗಳನ್ನು ಚಾಸಾ 18 ರವರು ಮಾಡಿ ನೀಡುತ್ತಿದ್ದರು. ಸದರಿ ದಾಖಲೆಗಳನ್ನು ನಮ್ಮಿಂದ ಪಡೆದ ನಂತರ 1ನೇ ಆರೋಪಿಯು 2ನೇ

ಪ್ರತಿಗೆ ಚಾಸಾ 18 ರವರ ಕಿರು ಸಹಿಯನ್ನು ತಿದ್ದಿ ಪೂರ್ಣ ಸಹಿಯನ್ನು ಮಾಡಿ ಬ್ಯಾಂಕಿನಿಂದ ಹಿಂಬರಹವನ್ನು ಪಡೆದು ಖಜಾನೆಗೆ ವೇತನಕ್ಕಾಗಿ ಸಲ್ಲಿಸಿದ್ದರು. ನಂತರ ಈ ರೀತಿ ಎರಡು ಎರಡು ಬಾರಿ ವೇತನಗಳು ಆಗುತ್ತಿರುವ ಬಗ್ಗೆ ಚಾಸಾ 19 ರವರು ತಿಳಿದುಕೊಂಡು ಖಜಾನೆಗೆ ಮಾಹಿತಿಯನ್ನು ನೀಡಿರುತ್ತಾರೆ.

ಸದರಿ ಬಿಲ್ಲುಗಳ ಪೈಕಿ ಮೂಲ ಬಿಲ್ಲಿನ ಸಂಬಂಳವನ್ನು 1ನೇ ಆರೋಪಿಯು ತನ್ನ ಖಾತೆಗೆ ವರ್ಗಾಯಿಸಿಕೊಂಡು, ನಕಲೀ ಬಿಲ್ಲಿನ ಸಂಬಂಳವನ್ನು 2ನೇ ಆರೋಪಿಯ ಖಾತೆಗೆ ವರ್ಗಾಯಿಸಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ಚಾಸಾ 19 ರವರು ಶ್ರೀರಾಂಪುರ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದರು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲುಃ 2ನೇ ಆರೋಪಿಯ ಪರ ಶ್ರೀ ಕೆ.ಎ.ಪಿ ವಕೀಲರಿಂದಃ

ನನ್ನ ಜೊತೆ 3 ಜನ ಎಸ್.ಡಿ.ಎ ಆಗಿ ಕೆಲಸ ಮಾಡುತ್ತಿದ್ದರು. 141 ಅನುದಾನಿತ ಶಾಲೆಗಳಿಗೆ ಸಂಬಂಧಿಸಿ ಬೇರೆ ಬೇರೆಯವರಿಗೆ ಜವಾಬ್ದಾರಿಯನ್ನು ವಹಿಸಿದ್ದರು. ಸದರಿ ವೇತನದ ಬಿಲ್ಲುಗಳು ಆಯಾ ಸಂಸ್ಥೆಯಿಂದ ಬರುತ್ತಿದ್ದವು. ಸದರಿ ಬಿಲ್ಲುಗಳು ಪ್ರತಿ ತಿಂಗಳು ಬರುತ್ತಿದ್ದವು. 2ನೇ ಬಿಲ್ಲನ್ನು ಸಲ್ಲಿಸಿರುವುದು ನಮ್ಮ ಕಡತಕ್ಕೆ ಸ್ವೀಕೃತಿ ಆಗಿರುವುದಿಲ್ಲ. ಸದರಿ ಬಿಲ್ಲುಗಳನ್ನು 1ನೇ ಆರೋಪಿಯು ಸೃಷ್ಟಿಮಾಡಿರುತ್ತಾರೆ ಎಂದು ಬಿ ಇ ಒ ರವರು ತಿಳಿಸಿದ ಮೇರೆಗೆ ನನಗೆ ತಿಳಿದಿರುತ್ತದೆ. ನಾನು ವೈಯಕ್ತಿಕವಾಗಿ ಹೋಗಿ ಸದರಿ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. 1ನೇ ಆರೋಪಿಯ ಖಾತೆಯನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ. 2ನೇ ಆರೋಪಿಯ ಖಾತೆಗೆ 2ನೇ ಬಿಲ್ ಮೂಲಕ ಪಾವತಿಯಾಗಿರುವ ಬಗ್ಗೆ ದಾಖಲೆಯನ್ನು ನಾನು ನೋಡಿರುವುದಿಲ್ಲ. ನಾನು ವೈಯಕ್ತಿಕವಾಗಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುವುದಿಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 3ನೇ ಆರೋಪಿಯ ಪರ ಶ್ರೀ ವಿವಿಹೆಚ್ ವಕೀಲರಿಂದಃ ಇಲ್ಲಾ

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ